# ಕರ್ನಾಟಕ ವಿಧಾನ ಸಭೆ
# KARNATAKA LEGISLATIVE ASSEMBLY

ಶುಕ್ರವಾರ 8ನೇ ಮಾರ್ಚ್ 1996ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 9.30 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

## ಪ್ರಕಟಣೆ

ಅಧ್ಯಕ್ಷರು : ನಿನ್ನೆಯ ದಿವಸ ವಿಧಾನಸಭೆಯ ವಿಷಯ ಸಮಿತಿಗಳ ರಚನೆ ಹಾಗೂ ಇತರೆ ನಿಯಮಗಳಿಗೆ ಸಂಬಂಧಿಸಿದಂತೆ, ತಿದ್ದುಪಡಿಗಳಿಗೆ ಸಂಬಂಧಿಸಿದಂತೆ ಸಭೆಯು ಅನುಮೋದನೆ ನೀಡಿತ್ತು. ವಿಷಯ ಸಮಿತಿಗಳ ರಚನೆಗೆ ಸಂಬಂಧಿಸಿದಂತೆ, ಪ್ರತಿಯೊಂದು ವಿಷಯ ಸಮಿತಿಯಲ್ಲೂ ಒಂಬತ್ತು ಜನ ಸದಸ್ಯರಿರಬೇಕೆಂದು, ವಿಧಾನಸಭೆಯಿಂದ ಏಳು ಜನಕ್ಕಿಂತ ಹೆಚ್ಚಾಗದಂತೆ ಸದಸ್ಯರನ್ನು ಸಭಾಧ್ಯಕ್ಷರು ನಾಮನಿರ್ದೇಶನಗೊಳಿಸಬೇಕೆಂದು ಹಾಗೂ ವಿಧಾನಪರಿಷತ್ತಿನಿಂದ ಇಬ್ಬರು ಸದಸ್ಯರನ್ನು ಸಭಾಪತಿಗಳು ನಾಮನಿರ್ದೇಶನ ಮಾಡಬೇಕೆಂದು ಅಂಗೀಕಾರ ಪಡೆಯಲಾಗಿತ್ತು. ಈ ಬಗ್ಗೆ ಮೇಲ್ಮನೆಯಲ್ಲಿಯೂ ಸಹ ಚರ್ಚೆಯಾಗಿ ವಿಧಾನಸಭೆಯಲ್ಲಿ ಏಳು ಜನ ಸದಸ್ಯರನ್ನು ಹಾಗೂ ವಿಧಾನಪರಿಷತ್ತಿನಿಂದ ಮೂರು ಜನ ಸದಸ್ಯರನ್ನು ನಾಮ ನಿರ್ದೇಶನ ಮಾಡಬೇಕೆಂದು ಅಂಗೀಕಾರ ನೀಡಿದ್ದಾರೆ. ಕಾರಣ ಈ ಪ್ರಸ್ತಾವನೆಗೆ ಸದನವು ಒಪ್ಪುವುದೆಂದು ಭಾವಿಸುತ್ತೇನೆ.

## ಸಭೆಯ ಮುಂದಿದಲಾದ ಕಾಗದಪತ್ರಗಳು

I. ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಮಂತ್ರಿ ಅವರ ಪರವಾಗಿ;

1964ನೇ ಸಾಲಿನ ಕರ್ನಾಟಕ ಭೂಕಂದಾಯ ಅಧಿನಿಯಮದ ಪ್ರಕರಣದ 194(2)ನೇ ಕಲಮಿನ ಮೇರಗೆ; ವಿಜಾಪುರದ ಜಿಲ್ಲೆಯ ಬಾದಾಮಿ ತಾಲ್ಲೂಕಿನ 97 ಗ್ರಾಮಗಳ 1994-95ನೇ ಸಾಲಿನ ಭೂ ಕಂದಾಯ 77, 368.99 ರೂಪಾಯಿಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 2-2-1996 ರಂದು ಹೊರಡಿಸಲಾದ ಆರ್‌ಡಿ 286 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆಯನ್ನು ಮಂಡಿಸುತ್ತೇನೆ.

II. ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

: ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರೌಢ ಶಿಕ್ಷಣ ಮಂತ್ರಿ ಅವರ ಪರವಾಗಿ ;

1976 ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ 45(2)ನೇ ಕಲಮಿನ ಮೇರಗೆ; 1993-94ನೇ ಸಾಲಿನ ಮಂಗಳೂರು ವಿಶ್ವವಿದ್ಯಾಲಯ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

III. ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿ ಅವರ ಪರವಾಗಿ

1993 ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 262(3)ನೇ ಕಲಮಿನ ಮೇರಗೆ; 1993-94ನೇ ಸಾಲಿನ ಬಳ್ಳಾರಿ ಜಿಲ್ಲಾ ಪಂಚಾಯತ್ನ ವಾರ್ಷಿಕ ಲೆಕ್ಕಗಳು ಹಾಗೂ ಲೆಕ್ಕ ಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

IV. ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)ಮಾನ್ಯ ಅಧ್ಯಕ್ಷರೆ, ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕ ಮಂತ್ರಿ) ಅವರ ಪರವಾಗಿ

1956ರ ಕಂಪೆನಿಗಳ ಕಾಯ್ದೆಯ 619ಎ ಕಲಮಿನ ಮೇರಗೆ; 1994-95ನೇ ಸಾಲಿನ ಮೈಸೂರು ಶುಗರ್ ಕಂಪನಿ ಲಿಮಿಟೆಡ್ 61ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

## ವರದಿಯನ್ನೊಪ್ಪಿಸುವುದು

ಶ್ರೀ ಡಿ. ನಾರಾಯಣದಾಸ್ : ಮಾನ್ಯ ಅಧ್ಯಕ್ಷರೆ, ಕಂದಾಯ ಇಲಾಖೆಯ ಮುಜರಾಯಿ ವ್ಯಾಪ್ತಿಯಲ್ಲಿ ಬರುವ ಧಾರ್ಮಿಕ ದತ್ತಿ ಸಂಸ್ಥಗಳ ಕುರಿತು ಎರಡನೇ ವರದಿ, ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಕಾರ್ಯವೈಖರಿಯ ಎರಡನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ

ಅಧ್ಯಕ್ಷರು : ಶ್ರೀಮತಿ ಪ್ರಮೀಳಾ ನೇಸರ್ಗಿ (ಅಧ್ಯಕ್ಷರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ)ಯವರು ಸದನಕ್ಕೆ ಇನ್ನೂ ಬಾರದೆ ಇರುವುದರಿಂದ ಅವರ ಪರವಾಗಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ನಾಲ್ಕನೇ ವರದಿಯನ್ನು ನಾನೇ ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

## 1996-97ನೇ ಸಾಲಿನ ಆಯವ್ಯಯದ ಮೇಲೆ ನಡೆದ ಸಾಮಾನ್ಯ ಚರ್ಚೆಗೆ ಮಾನ್ಯ ಹಣಕಾಸು ಮಂತ್ರಿಗಳಿಂದ ಉತ್ತರ

+ ಶ್ರೀ ಸಿದ್ದರಾಮಯ್ಯ (ಹಣಕಾಸು ಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, 1996-97ನೇ ಆಯವ್ಯಯದ ಮೇಲೆ ಸುಮಾರು 22 ಜನ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ವಿರೋಧಪಕ್ಷದ ನಾಯಕರು, ಇತರೆ ಪಕ್ಷಗಳ ನಾಯಕರು ಹಾಗೂ ಬೇರೆ ಮಾನ್ಯ ಸದಸ್ಯರು